

ನೆಕ್ಲೇಸ್, ಪದಕ, ಕಿವಿಯೋಲೆ, ವಂಕಿ,ಡಾಬು, ಸೊಂಟದ ಪಟ್ಟಿ, ಬಳೆ, ಉದ್ದನೆಯ ಹಾರ, ಕಾಲ್ಗೆಜ್ಜೆ, ಕಾಲು ಕಡಗ, ಕೈ ಕಡಗ, ಉಂಗುರ, ಬ್ರೇಸ್ಲೆಟ್... ಹೀಗೆ ಒಡವೆಗಳಲ್ಲಿ ಯಾವೆಲ್ಲ ಬಗೆಯ ವಿನ್ಯಾಸಗಳಿವೆಯೋ ಅವುಗಳೆಲ್ಲದರಲ್ಲೂ ಹಕ್ಕಿಗಳ ವಿನ್ಯಾಸ ಅಚ್ಚಾಗುತ್ತಿವೆ. ಚಿನ್ನ, ಬೆಳ್ಳಿ, ಹರಳು, ಮುತ್ತುಗಳನ್ನು ಬಳಸಿ ತಯಾರಿಸುವ ಆಭರಣಗಳು,ಆರ್ಟಿಫಿಷಿಯಲ್ ಆಭರಣಗಳಲ್ಲೂ ಹಕ್ಕಿಗಳ ವಿನ್ಯಾಸಗಳು ಪಾರಮ್ಯ ಮೆರೆದಿವೆ.

ಉದ್ದನೆಯ ಹಾರದ ಎಳೆಗಳಲ್ಲಿ ಹಕ್ಕಿಗಳ ಚಿತ್ತಾಕರ್ಷಕ ಭಂಗಿಗಳು ಒಡಮೂಡಿರುತ್ತವೆ. ಅದರ ಡಾಲರ್‌ನಲ್ಲಿ ಸಂತೋಷ, ಸೌಮ್ಯ ಸ್ವಭಾವವನ್ನು ಸ್ಫುರಿಸುವ ಹಕ್ಕಿಯೊಂದರ ಭಂಗಿ ಚಿತ್ರಿತವಾಗಿರುತ್ತದೆ. ಇನ್ನು ಕೆಲವು ಹಾರಗಳಲ್ಲಿ ಕಥೆಯೊಂದನ್ನು ಸಾರುವ ಹಕ್ಕಿಗಳ ವಿನ್ಯಾಸವಿರುತ್ತವೆ. ಹಾರಗಳಿಗೆ ತಕ್ಕಂತೆ ಹಕ್ಕಿಗಳ ವಿನ್ಯಾಸದ ಕಿವಿಯೋಲೆ, ಜುಮುಕಿ, ಬಳೆಗಳೂ ವಿನ್ಯಾಸಗೊಂಡಿರುತ್ತವೆ.

ಗಂಡಭೇರುಂಡ, ನವಿಲು, ಗಿಳಿ, ಹಂಸ, ಕೋಗಿಲೆ, ಪಾರಿಜಾತ, ಮೈನಾ ಮೊದಲಾದ ಹಕ್ಕಿಗಳ ವಿವಿಧ ಭಂಗಿಗಳು ಭಾರತೀಯ ಆಭರಣಗಳಲ್ಲಿ ಅಚ್ಚಾಗಿವೆ. ಇವುಗಳಲ್ಲಿ ಗಂಡಭೇರುಂಡ ಹಾಗೂ ನವಿಲು, ಗಿಳಿಗಳ ವಿನ್ಯಾಸಗಳು ಒಡವೆಪ್ರಿಯರನ್ನು ಅತಿ ಹೆಚ್ಚು ಆಕರ್ಷಿಸಿವೆ. ಹಾಗಾಗಿಯೇ ಈ ಹಕ್ಕಿಗಳ ವಿನ್ಯಾಸ ಹೆಚ್ಚು ಬಳಕೆಯಲ್ಲಿದೆ.

## ಗಂಡಭೇರುಂಡ

ಪಾರಂಪರಿಕ ಆಭರಣಗಳಲ್ಲಿ ಮುಂಚೂಣಿಯಲ್ಲಿರುವುದು ಗಂಡಭೇರುಂಡ ವಿನ್ಯಾಸ. ಧೈರ್ಯದ ಸಂಕೇತವಾಗಿ ಬಳಕೆಯಾಗುವ ಇದು ಮೈಸೂರು ಅರಸರ ಲಾಂಛನವೂ ಹೌದು. ಈ ಕಾರಣಕ್ಕೆ ಮೈಸೂರು ಭಾಗದಲ್ಲಿ ಈ ವಿನ್ಯಾಸಕ್ಕೆ ಹೆಚ್ಚು ಮಹತ್ವ. ಮೈಸೂರು ಅರಸರು ಗಂಡಭೇರುಂಡ ವಿನ್ಯಾಸದ ಒಡವೆಗಳನ್ನು ಧರಿಸುತ್ತಿದ್ದರು. ಕೆಂಪು ಮಾಣಿಕ್ಯದಿಂದ ವಿನ್ಯಾಸಗೊಂಡ ಗಂಡಭೇರುಂಡ ಆಭರಣವೇ ಈಗ ಎಲ್ಲರ ಅಚ್ಚುಮೆಚ್ಚು. ಇದಲ್ಲದೆ, ಆ್ಯಂಟಿಕ್ ಶೈಲಿಯ ನೆಕ್ಲೇಸ್, ಡಾಬು, ಪದಕ, ಕಿವಿಯೋಲೆಯಲ್ಲೂ ಈ ವಿನ್ಯಾಸ ಅಚ್ಚೊತ್ತಿದೆ.

## ಮಯೂರ

ಭಾರತದ ರಾಷ್ಟ್ರೀಯ ಪಕ್ಷಿ ಮಯೂರವು ತನ್ನ ಸೌಂದರ್ಯ, ಘನತೆ ಹಾಗೂ ಭಕ್ತಿಯ ಸೂಚಕ. ಇದು ಕಾರ್ತಿಕೇಯನ ವಾಹನವೂ ಹೌದು. ನವಿಲಿನ ಚಿತ್ತಾಕರ್ಷಕ ಭಂಗಿಗಳು ಒಡವೆಗಳಲ್ಲಿ ಒಡಮೂಡಿವೆ. ತನ್ನ ವಿವಿಧ ಭಂಗಿಗಳಿಂದಲೇ ಎಲ್ಲರನ್ನೂ ಆಕರ್ಷಿಸುವ ನವಿಲು ಆಭರಣ ವಿನ್ಯಾಸಕಾರರನ್ನೂ ಬಹುವಾಗಿ ಆಕರ್ಷಿಸಿದೆ. ಬಹುತೇಕ ವಿನ್ಯಾಸಕಾರರ ಮೊದಲ ಆಯ್ಕೆ ಮಯೂರವೇ ಆಗಿರುತ್ತದೆ. ನವಿಲಿನ ಗರಿಗಳ ವಿನ್ಯಾಸವಂತೂ ಎಲ್ಲ ಬಗೆಯ ಆಭರಣಗಳಲ್ಲೂ ಪಸರಿಸಿದೆ. ಗರಿಬಿಚ್ಚಿದ ಮಯೂರದ ವಿನ್ಯಾಸಕ್ಕಿಂತ ವೈಯಾರದಿಂದ ನಡು ಬಳುಕಿಸಿ, ಕತ್ತು ಕೆಳಗೆ ಇರುವ ಮಯೂರದ ವಿನ್ಯಾಸ ಟ್ರೆಂಡ್ ಆಗಿದೆ. ಜುಮುಕಿ, ಬಳೆ, ಉದ್ದನೆಯ ಹಾರ, ವೈವಿಧ್ಯಮಯ ಕಿವಿಯೋಲೆಗಳು ಮಯೂರ ವಿನ್ಯಾಸದಲ್ಲಿ ಒಡಮೂಡಿವೆ. ಸಾಂಪ್ರದಾಯಿಕತೆಗೂ, ಸರಳತೆಗೂ 'ಮಯೂರ ವಿನ್ಯಾಸ' ಸೈ ಎನಿಸಿಕೊಂಡಿದೆ. ಈ ಕಾರಣಕ್ಕೇ ಇದು ಯುವತಿಯರ, ಅಜ್ಜಿಯಂದಿರ ಅಚ್ಚುಮೆಚ್ಚಾಗಿದೆ.

## ಗಿಳಿ

ಶಾಂತಿಯ ಸಂಕೇತವಾಗಿರುವ ಗಿಳಿ ದಕ್ಷಿಣ ಭಾರತದ ಆಭರಣಗಳ ವಿನ್ಯಾಸದಲ್ಲಿ ಪಾರಮ್ಯ ಮೆರೆದಿದೆ. ಕುಂದನ್ ಜ್ಯುವೆಲ್ಲರಿ, ಕೆಂಪು ಮಾಣಿಕ್ಯದ ಒಡವೆಗಳಲ್ಲಿ ಗಿಳಿಗಳ ವಿನ್ಯಾಸ ಅತ್ಯಾಕರ್ಷಕವಾಗಿ ಕಾಣುತ್ತದೆ. ಮದುಮಗಳ ಆಭರಣಗಳಲ್ಲಿ ಹೆಚ್ಚಾಗಿ ಗಿಳಿ ವಿನ್ಯಾಸವನ್ನು ಬಳಸಲಾಗುತ್ತದೆ.

## ಕೋಗಿಲೆ

ಕಾಮದೇವನ ಸಂಗಾತಿಯಾಗಿರುವ ಕೋಗಿಲೆ ಪ್ರೇಮ, ಸಂತೋಷದ ಸಂಕೇತ. ಕೋಗಿಲೆಯ ಸುಮಧುರ ಧ್ವನಿಯಂತೆ ಅದರ ವಿನ್ಯಾಸದ ಆಭರಣಗಳು ಬಹುತೇಕರನ್ನು ಆಕರ್ಷಿಸಿವೆ. ಉದ್ದನೆಯ ಹಾರ, ನೆಕ್ಲೇಸ್, ಚೌಕಗಳಲ್ಲಿ ಈ ವಿನ್ಯಾಸವನ್ನು ಹೆಚ್ಚು ಬಳಸಲಾಗುತ್ತದೆ.



ಒಡವೆ ವಿನ್ಯಾಸಕಿ ಮೀರಾ ರಘು

## ಹಂಸ

ಲಕ್ಷ್ಮೀದೇವಿಯ ವಾಹನವಾಗಿರುವ ಹಂಸ ಶುದ್ಧತೆ, ಸಂತೋಷ, ಐಶ್ವರ್ಯವನ್ನು ಪ್ರತಿನಿಧಿಸುತ್ತದೆ. ಹಂಸದ ವಿನ್ಯಾಸವನ್ನು ಆಭರಣಗಳಲ್ಲಿ ಬಳಸಿ ಧರಿಸಿದರೆ ಸಮೃದ್ಧಿ ಹಾಗೂ ಸಮಾಧಾನ ನೆಲೆಸುತ್ತದೆ ಎಂಬುದು ಬಹತೇಕರ ನಂಬಿಕೆ. ಈ ಕಾರಣಕ್ಕೆ ಹಂಸ ವಿನ್ಯಾಸದ ಒಡವೆಗಳಿಗೆ ಬೇಡಿಕೆ ಹೆಚ್ಚು.

'ನವಿಲು, ಗಿಳಿ, ಗಂಡಭೇರುಂಡ ಹಕ್ಕಿಗಳ ವಿನ್ಯಾಸಗಳು ಹೆಚ್ಚು ಟ್ರೆಂಡ್ ಸೃಷ್ಟಿಸಿವೆ. ಈ ವಿನ್ಯಾಸವನ್ನು ಮದುಮಗನ ಒಡವೆಗಳಲ್ಲಿ ಹೆಚ್ಚು ಬಳಸಲಾಗುತ್ತದೆ. ದೇವರ ವಿನ್ಯಾಸದ ಒಡವೆಗಳಲ್ಲಿ ಅದಕ್ಕೆ ಮ್ಯಾಚ್ ಆಗುವಂತೆ ಹಕ್ಕಿಗಳ ವಿನ್ಯಾಸವನ್ನೂ ಒಡಮೂಡಿಸಲಾಗುತ್ತದೆ. ಲಕ್ಷ್ಮೀದೇವಿಯ ಅಕ್ಕಪಕ್ಕ ನವಿಲಿನ ವಿವಿಧ ಭಂಗಿಗಳು ವಿನ್ಯಾಸಕಾರರ ಕೈಯಲ್ಲಿ ಅರಳಿದ್ದು, ಅವು ಹೆಚ್ಚು ಜನಪ್ರಿಯವಾಗಿವೆ. ಕುಂದನ್ ಒಡವೆಗಳಲ್ಲಿ ನವಿಲು ವಿನ್ಯಾಸ ಆಕರ್ಷಕವಾಗಿ ಕಾಣುತ್ತದೆ. ಅವುಗಳಿಗೆ ಹೆಚ್ಚು ಬೇಡಿಕೆ ಇದೆ. ಇನ್ನು ಜುಮುಕಿ, ಚಾಂದಾಲಿ, ನೆಕ್ಲೇಸ್‌ಗಳಲ್ಲಿ ನವಿಲು ಹಾಗೂ ಗಿಳಿಗಳ ವಿನ್ಯಾಸವನ್ನು ಹೆಚ್ಚು ಜನ ಇಷ್ಟಪಡುತ್ತಾರೆ' ಎನ್ನುತ್ತಾರೆ ದಾವಣಗೆರೆಯಲ್ಲಿರುವ 'ಆ್ಯಂಟಿಕ್ ಟ್ರೆಂಡ್ಸ್' ಮಳಿಗೆಯ ಒಡತಿ, ಆಭರಣ ವಿನ್ಯಾಸಕಿ ಮೀರಾ ರಘು.

'ಈಗೆಲ್ಲ ಸಾಂಪ್ರದಾಯಿಕ ಹಾಗೂ ಆಧುನಿಕ ಉಡುಪಿಗೆ ಹೊಂದಿಕೆಯಾಗುವಂತೆ ಪಕ್ಷಿಗಳ ವಿನ್ಯಾಸದ ಆಭರಣಗಳನ್ನು ವಿನ್ಯಾಸಗೊಳಿಸಲಾಗುತ್ತಿದೆ. ಸಾಂಪ್ರದಾಯಿಕ ಉಡುಗೆಗಳಿಗೆ ಅದ್ದೂರಿಯ ಒಡವೆಗಳು ಹೊಂದಿಕೆಯಾಗುತ್ತವೆ. ರೇಷ್ಮೆ ಸೀರೆ, ಗಾಗ್ರಾ ಚೋಲಿ, ಲೆಹೆಂಗಾ, ಲಂಗ– ದಾವಣಿ ಹಾಗೂ ಮದುಮಗನ ಶೇರ್ವಾನಿ, ಪಂಚೆ– ಶಲ್ಯ ಹೀಗೆ ವಿವಿಧ ವಿನ್ಯಾಸದ ಉಡುಗೆಗಳಿಗೆ ಅದ್ದೂರಿ ವಿನ್ಯಾಸದ ಒಡವೆಗಳು ಮ್ಯಾಚ್ ಆಗುತ್ತವೆ. ದೊಡ್ಡ ಮುತ್ತಿನ ಸರ, ಅದಕ್ಕೆ ಗಂಡಭೇರುಂಡದ ಪದಕದ ಆಭರಣ ಮದುಮಗನ ಶೇರ್ವಾನಿ ಮೇಲೆ ಧರಿಸಿದರೆ ಆಕರ್ಷಕವಾಗಿರುತ್ತದೆ. ಹಾಗೆಯೇ ಆಧುನಿಕ ಉಡುಪಿಗೆ ತಕ್ಕಂತೆಯೂ ಹಕ್ಕಿಗಳ ವಿನ್ಯಾಸದ ಒಡವೆಗಳಿಗೆ ಹೆಚ್ಚು ಬೇಡಿಕೆ ಇದೆ. ಕಿವಿಯೋಲೆಯಲ್ಲೂ ಸ್ಟಡ್ ರೀತಿಯ ದೊಡ್ಡ ಓಲೆಯಲ್ಲಿ ಹಕ್ಕಿಗಳ ವಿನ್ಯಾಸ ಟ್ರೆಂಡ್ ಸೃಷ್ಟಿಸಿದೆ' ಎನ್ನುತ್ತಾರೆ ಮೀರಾ ರಘು.

ಭಾರತೀಯ ಆಭರಣಗಳಲ್ಲಿ ಪಕ್ಷಿಗಳ ವಿನ್ಯಾಸ ಜನಪ್ರಿಯವಾಗಿದೆ. ಕಲೆ, ಸಂಸ್ಕೃತಿಯನ್ನು ಬಿಂಬಿಸುವ ವಾಹಕಗಳಾಗಿಯೂ ಪಕ್ಷಿಗಳ ವಿನ್ಯಾಸ ಜನಜನಿತವಾಗಿವೆ. ■